

# ನಿಯಮಬಾಹಿರ

ಹಾಗೆ ನೋಡಿದರೆ ವೆಂಕಯ್ಯನನ್ನು ನಮ್ಮ ಕಂಪೆನಿಯ ಉದ್ಯೋಗಿಯಾಗಿ ಸೇರಿಸಿಕೊಳ್ಳುವುದು ನಿಯಮಗಳ ಉಲ್ಲಂಘನೆಯಾಗುತ್ತದೆ. ಯಾಕೆಂದರೆ ಅವನಿಗೆ ಎಂಜಿನಿಯರಿಂಗ್‌ನಲ್ಲಿ ಬಂದ ಅಂಕಗಳು ಶೇಕಡಾ ಎಪ್ಪತ್ತಕ್ಕಿಂತಲೂ ಕಡಿಮೆಯಿತ್ತು. 10ನೆಯ ತರಗತಿಯಲ್ಲಿ, ಪಿ.ಯು.ಸಿ.ಯಲ್ಲಿ ಒಳ್ಳೆಯ ಅಂಕಗಳನ್ನೇ ಗಳಿಸಿದ್ದರೂ, ಯಾಕೋ ಎಂಜಿಯನಿಯರಿಂಗ್ ಕೊನೆಯ ಎರಡು ವರ್ಷಗಳಲ್ಲಿ ಮುಗ್ಗರಿಸಿದ್ದ. ಆದರೆ ನಿಯಮಗಳನ್ನು ಕೆಲವು ವಿಶಿಷ್ಟ ಸಂದರ್ಭದಲ್ಲಿ, ಕಂಪೆನಿಯ ಒಳಿತಿಗಾಗಿ ಸಡಲಿಸಬಹುದು ಎಂಬ ಮತ್ತೊಂದು ನಿಯಮವೂ ನಮ್ಮಲ್ಲಿತ್ತು. ಕಂಪೆನಿಯ ಅತ್ಯಂತ ಉನ್ನತ ಹುದ್ದೆಯಲ್ಲಿದ್ದ ಕೆಲವರು ಮಾತ್ರ ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಅದರ ಫಲಿತಾಂಶದ ಜವಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕಾಗಿತ್ತು. ಆಯ್ಕೆಯಾದ ಅಭ್ಯರ್ಥಿಯು ಕೆಲಸ ಮಾಡುವುದರಲ್ಲಿ ವಿಫಲನಾದರೆ, ಅದಕ್ಕೆ ಮ್ಯಾನೇಜ್‌ಮೆಂಟ್ ಮುಂದೆ